ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾದಂ. ಧಾರವಾಡ
ಇವರ ನ್ಯಾಯಾಲಯದಲ್ಲಿ

ಸಿ.ಸಿ ನಂಬರ ಃ 466/2015

**ಪಿಡಬ್ಲ್ಯು ಃ 3**
ಸಿಡಬ್ಲ್ಯು ಃ 6

ಸಾಕ್ಷಿದಾರನ ಹೆಸರು ಃ- ಬಾಬಾಸಾಬ ರಾಮದುರ್ಗ

ತಂದೆಯ ಹೆಸರು ಃ- ರಜಾಕಸಾಬ

ವಯಸ್ಸು ಃ- 55 ವರ್ಷ

ಉದ್ಯೋಗ ಃ- ಆಟೋಚಾಲಕ

ವಾಸಸ್ಥಳ ಃ- ಧಾರವಾಡ

ಸತ್ಯ ಪ್ರತಿಜ್ಞೆ ಮೇರೆಗೆ ಃ 08-11-2019

ಮುಖ್ಯ ವಿಚಾರಣೆ ಃ- ಸಸಅ ರವರಿಂದ.

ಸುಮಾರು 4 ವರ್ಷದ ಹಿಂದೆ ಯಾಲಕ್ಕಿಶೆಟ್ಟರ ಕಾಲೊನಿಯ ಹತ್ತಿರ ಕಳ್ಳತನಕ್ಕೆ ಸಂಬಂದಿಸಿದಂತೆ ನನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತಾರೆ. ಆ ಸಮಯದಲ್ಲಿ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಲ್ಲ. ಸಾಕ್ಷಿಯು ಜಪ್ತಿ ಪಂಚನಾಮೇಯನ್ನು ನೋಡುತ್ತಿದ್ದು ಅದನ್ನು ನಿಪಿ 4 ಎಂದು ಸಾಕ್ಷಿ ಸಹಿಯನ್ನು ನಿಪಿ 4 ಎ ಎಂದು ಗುರುತಿಸಲಾಯಿತು. ಅಲ್ಲಿ ನಾನು ಹಾಗು ಪೋಲಿಸರು ಮಾತ್ರ ಇದ್ದೆವು

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಎಂದು ಪರಿಗಣಿಸಲಾಯಿತು. ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿದರು. ನೀಡಲಾಯಿತು)**

**ಪಾಟೀ ಸವಾಲುಃ ಶ್ರೀ ಸಸಅ ಅವರಿಂದ**

ಸದರಿ ಪಂಚನಾಮೆಯನ್ನು ದಿನಾಂಕ 18-11-2014 ರಂದು ರಾತ್ರಿ 8.10 ರಿಂದ 9.15 ವರೆಗೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪಂಚನಾಮೆ ಸಮಯದಲ್ಲಿ 1 ನೇ ಆರೋಪಿ ಜಗದೀಶ ಇವರು ಹಾಜರುಪಡಿಸಿದ ಬಂಗಾರದ ಚೈನದ 3 ತುಂಡುಗಳು, 1 ಮೊಬೈಲ್ ಹ್ಯಾಂಡಸೆಟ್ ಹಾಗು ಒಂದು ಜರಕಿನ್ನ್ನು 2 ನೇ ಬಸವರಾಜ ಇವರು ಹಾಜರುಪಡಿಸಿದ ಸ್ಪೆಂಡರ್ ಪ್ಲಸ್ ಮೋಟಾರ್ ಸೈಕಲ್ ನಂಬರ ಕೆಎ 25 ಎಕ್ಸ 4017 ಮತ್ತು ಒಂದು ಸ್ಯಾಮಸಂಗ ಮೊಬೈಲ್ ಹ್ಯಾಂಡೆಸೆಟ್ಟನ್ನು ನಮ್ಮ ಸಮಕ್ಷಮ ಜಪ್ತಿ ಮಾಡಿದರು ಎಂದರೆ ಸರಿಯಲ್ಲ.ನ್ಯಾಯಾಲಯದ ಮುಂದೆ ಇರುವ ಆರೋಪಿತರು ಪಂಚನಾಮೆ ಸಮಯದಲ್ಲಿ ಅಲ್ಲಿದ್ದರು ಅವರೇ ಈ ವಸ್ತುಗಳನ್ನು ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ. ನಿಪಿ 4 ರ ಪಂಚನಾಮೆ ವಿಷಯಗಳು ಸತ್ಯವಾಗಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ಹಾಗು 2 ನೇ ಆರೋಪಿರ ಪರ ವಕೀಲರಿಂದ**

ನನಗೆ ಓದಲು ಬರೆಯಲು ಬರುವುದಿಲ್ಲ ಎಂದರೆ ನಿಜ. ನಿಪಿ 4 ರಲ್ಲಿ ಬರೆದಿರುವ ವಿಷಯ ಕುರಿತು ನನಗೆ ಗೊತ್ತಿಲ್ಲ ಪೋಲಿಸರು ಸಹಿ ಮಾಡಲು ಹೇಳಿದ ಕಾರಣ ಠಾಣೆಯಲ್ಲೇ ಸಹಿ ಮಾಡಿರುತ್ತೇನೆ ಎಂದರೆ ನಿಜ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ, ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾದೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ. ಧಾರವಾಡ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾದಂ. ಧಾರವಾಡ
ಇವರ ನ್ಯಾಯಾಲಯದಲ್ಲಿ

<u>ಸಿ.ಸಿ ನಂಬರ ಃ 466/2015</u>

**ಪಿಡಬ್ಲ್ಯು ಃ 4**
ಸಿಡಬ್ಲ್ಯು ಃ 7

ಸಾಕ್ಷಿದಾರನ ಹೆಸರು ಃ- ಮಹಮ್ಮದ ಹನೀಫ್ ಯರಗಟ್ಟಿ

ತಂದೆಯ ಹೆಸರು ಃ- ಫಕ್ರುದ್ದೀನ್ ಸಾಬ

ವಯಸ್ಸು ಃ- 76 ವರ್ಷ

ಉದ್ಯೋಗ ಃ- ನಿವೃತ್ತರು

ವಾಸಸ್ಥಳ ಃ- ಧಾರವಾಡ

ಸತ್ಯ ಪ್ರತಿಜ್ಞೆ ಮೇರೆಗೆ ಃ 08-11-2019

**<u>ಮುಖ್ಯ ವಿಚಾರಣೆ ಃ- ಸಸಅ ರವರಿಂದ.</u>**

ಸುಮಾರು 4 ವರ್ಷದ ಹಿಂದೆ ನಾನು ಠಾಣೆಯ ಮುಂದೆ ಹೋಗುವಾಗ ಪೋಲಿಸರು ಕರೆಸಿ ನನ್ನ ಸಹಿ ಪಡೆದಿರುತಾರೆ. ಯಾವ ಕಾರಣಕ್ಕೆ ನನ್ನ ಸಹಿ ಪಡೆದರು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಲ್ಲ. ಸಾಕ್ಷಿಯು ಜಪ್ತಿ ಪಂಚನಾಮೇಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ 4 ಎಂದು ಸಾಕ್ಷಿ ಸಹಿಯನ್ನು ನಿಪಿ 4 ಬಿ ಎಂದು ಗುರುತಿಸಲಾಯಿತು.

**(ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಲಾಯಿತು. ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿದರು. ನೀಡಲಾಯಿತು)**

**ಪಾಟೀ ಸವಾಲುಃ ಶ್ರೀ ಸಸಅ ಅವರಿಂದ**

ದಿನಾಂಕ 18-11-2014 ರಂದು ರಾತ್ರಿ 8.10 ರಿಂದ 9.15 ವರೆಗೆ ಶೆಟ್ಟರ ಕಾಲೋನಿಯ ಬಾಲಾಜಿ ಗೋಲ್ಡ ಅಂಗಡಿಯ ಹತ್ತಿರ ನನ್ನ ಹಾಗು ಚಾಸಾ 6 ಬಾಬಾಸಾಬ ಇವರ ಸಮಕ್ಷಮ ಸದರಿ ಪಂಚನಾಮೆಯನ್ನು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪಂಚನಾಮೆ ಸಮಯದಲ್ಲಿ 1 ನೇ ಆರೋಪಿ ಜಗದೀಶ ಇವರು ಹಾಜರುಪಡಿಸಿದ ಬಂಗಾರದ ಚೈನದ 3 ತುಂಡುಗಳು, 1 ಮೊಬೈಲ್ ಹ್ಯಾಂಡಸೆಟ್ ಹಾಗು ಒಂದು ಜರಕಿನ್ನು 2 ನೇ ಬಸವರಾಜ ಇವರು ಹಾಜರುಪಡಿಸಿದ ಸ್ಪೆಂಡರ್ ಪ್ಲಸ್ ಮೋಟಾರ್ ಸೈಕಲ್ ನಂಬರ ಕೆಎ 25 ಎಕ್ಸ 4017 ಮತ್ತು ಒಂದು ಸ್ಯಾಮಸಂಗ ಮೊಬೈಲ್ ಹ್ಯಾಂಡೆಸಟ್ಟನ್ನು ನಮ್ಮ ಸಮಕ್ಷಮ ಜಪ್ತಿ ಮಾಡಿ ನಿಪಿ 4 ರಂತೆ ಪಂಚನಾಮೆ ಬರೆದು ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ನಿಪಿ 4 ರ ಪಂಚನಾಮೆ ವಿಷಯಗಳು ಸತ್ಯವಾಗಿದ್ದರೂ

ಆರೋಪಿತರಿಗೆ ಸಹಾಯ ಮಾಡಲು ಸುಳ್ಳು  ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ  ಆರೋಪಿರ ಪರ ವಕೀಲರಿಂದ**

ಆರೋಪಿತರ ಪರ ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ,                                        ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾದೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ. ಧಾರವಾಡ.